Code No. **10 X(E)**

## ವಾಣಿಜ್ಯ ಪರೀಕ್ಷೆಗಳು

# ಕನ್ನಡ ಬೆರಳಚ್ಚು – ಪ್ರಥಮ ದರ್ಜೆ – ಪ್ರಥಮ ಪತ್ರಿಕೆ

ಜನವರಿ / ಫೆಬ್ರವರಿ, 2020

ಸಮಯ : 15 ನಿಮಿಷಗಳು

ಅಂಕಗಳು : 100

***ಸೂಚನೆಗಳು :*** 1) ಈ ಕೆಳಗೆ ಕೊಟ್ಟಿರುವ ವಿಷಯವನ್ನು 10 ರಿಂದ 75 ಸ್ಥಾನಗಳಿಗೆ ಅಂಚಿನ ತಡೆಗಳನ್ನು ಸ್ಥಿರಪಡಿಸಿಕೊಂಡು ಎರಡು ಸಾಲುಗಳ ತೆರಪಿನಲ್ಲಿ ಬೆರಳಚ್ಚು ಮಾಡಬೇಕು.

2) ಕಾಗದದ ಒಂದು ಭಾಗದಲ್ಲಿ ಮಾತ್ರ ಬೆರಳಚ್ಚು ಮಾಡಬೇಕು.

3) ತಪ್ಪಿಲ್ಲದೆ ಅಂದವಾಗಿ ಬೆರಳಚ್ಚು ಮಾಡಲು ವಿಶೇಷ ಗಮನ ಕೊಡಬೇಕು.

---

ಅವನೊಬ್ಬ ಸಾಮಾನ್ಯ ಬಡ ಕುಟುಂಬದಲ್ಲಿ ಜನಿಸಿದ ಹುಡುಗ. ಚಿಕ್ಕಂದಿನಿಂದಲೇ ತಂದೆ ತಾಯಿಯರು ಜೀವನ ನಿರ್ವಹಣೆ ಮಾಡಲು ಪಡುತ್ತಿದ್ದ ಕಷ್ಟ, ದುಡ್ಡಿಗಾಗಿ ಅವರು ಪಡುತ್ತಿದ್ದ ಪರದಾಟ ಅವನ ಮನಸ್ಸನ್ನು ಆಳವಾಗಿ ಹೊಕ್ಕಿತ್ತು. ಹಾಗೆಂದು ಕನಸು ಕಾಣಲೇನೂ ಬಡತನವಿಲ್ಲವಲ್ಲ. ಅಂತೆಯೇ ಅವನಿಗೆ ಸಹಜವಾಗಿ ಶ್ರೀಮಂತಿಕೆಯ ಕನಸು ಹುಟ್ಟಿಕೊಂಡಿತ್ತು. ಅವನ ಅಮ್ಮನಿಗೋ ಮಗನು ಸಮಾಜದಲ್ಲಿ ದೊಡ್ಡ ವ್ಯಕ್ತಿಯಾಗಿ ಬೆಳೆದು ಒಳ್ಳೆಯ ಹೆಸರು ಗಳಿಸಬೇಕು, ಸಮಾಜಕ್ಕೆ ಒಳಿತನ್ನು ಮಾಡಬೇಕು, ಕುಟುಂಬಕ್ಕೆ ಕೀರ್ತಿಯನ್ನು ತರಬೇಕೆಂಬ ಬಯಕೆ. ಎಲ್ಲರಿಗೂ ಬೇಕಾದಂತಹ ಪರೋಪಕಾರಿಯಾಗಿ ಸಜ್ಜನ ವ್ಯಕ್ತಿಯಾಗಿ ಮಗನು ಪ್ರಸಿದ್ಧನಾಗಬೇಕೆಂದು ಕನಸು. ಆಕೆ ಚಿಕ್ಕಂದಿನಿಂದಲೂ ಅವನ ಬಳಿ ಕಂದಾ, ನೀನು ದೊಡ್ಡವನಾದ ಮೇಲೆ ನಮಗೆಲ್ಲರಿಗೂ ಹೆಮ್ಮೆಯನ್ನು ತರುವಂತಹ ದೊಡ್ಡ ವ್ಯಕ್ತಿಯಾಗಿ ಬೆಳೆದು ಹೆಸರು ಗಳಿಸಬೇಕೆಂಬ ಬಯಕೆ. ಎಲ್ಲರಿಗೂ ಬೇಕಾದಂತಹ ಪರೋಪಕಾರಿ ಸಜ್ಜನನಾದ ವ್ಯಕ್ತಿಯಾಗಿ ಮಗ ಪ್ರಸಿದ್ಧನಾಗಬೇಕೆಂಬ ಆಸೆ ಎಲ್ಲಾ ತಾಯಂದಿರಿಗಿರುವಂತೆ ನನಗೂ ಇದೆ, ನೀನು ಈ ಸಮಾಜಕ್ಕೆ ನೆರಳಾಗಿ ಬದುಕಬೇಕು ಎಂದು ಪದೇ ಪದೇ ಹೇಳುತ್ತಿದ್ದಳು.

ಹಾಗಾಗಿ ಹುಡುಗ ಬಾಲ್ಯದಿಂದಲೇ ಹಣವನ್ನು ಗಳಿಸಲು ಹಾಗೂ ಪ್ರಸಿದ್ಧನಾಗುವ ಕನಸು ಕಾಣುತ್ತಾ ತನ್ನದೇ ಆದ ರೀತಿಯಲ್ಲಿ



[ Turn over

ಯೋಚಿಸುತ್ತಾ ದೊಡ್ಡವನಾಗತೊಡಗಿದ. ದಿನಗಳು ಕಳೆದಂತೆ ಈ ವಿಷಯಗಳ ಕುರಿತು ಬಹಳ ವಿಚಾರ ಮಾಡಲು ತೊಡಗಿದ. ಯಾವ ಮಾರ್ಗದಲ್ಲಿ ಸಾಗಿದರೆ ತಾನು ಇವೆರಡನ್ನು ಪಡೆಯಬಹುದೆಂದು ಚಿಂತನೆ ಮಾಡಲು ತೊಡಗಿದ. ಒಮ್ಮೆ ಅವನ ಸಂಬಂಧಿಕರಾದ ಹಿರಿಯರೊಬ್ಬರು ಆತನ ಮನೆಗೆ ಆಕಸ್ಮಿಕವಾಗಿ ಬಂದರು. ಅವರ ಬಳಿ ಕೂತು ಸಹಜವಾಗಿ ತನ್ನ ಅಳಲನ್ನು ತೋಡಿಕೊಂಡ. ಆಗ ಹಿರಿಯರು, ಮಗೂ, ನೀನು ಹಣ ಗಳಿಕೆಯ ಹಿಂದೆ ಹೋದರೆ ಬರಿ ಶ್ರೀಮಂತನಾಗುತ್ತೀಯ, ಅಲ್ಲದೆ ನಿನ್ನಲ್ಲಿ ಸ್ವಾರ್ಥ ಕೂಡ ತುಂಬುತ್ತದೆ. ನೀನು ಪರಿಶ್ರಮದ ಹಿಂದೆ ಹೋದರೆ ಶ್ರೀಮಂತಿಕೆ ಹಾಗೂ ಸಜ್ಜನ ವ್ಯಕ್ತಿತ್ವ ಇವೆರಡೂ ನಿನ್ನದಾಗುತ್ತದೆ. ಉದ್ಯೋಗಿನಂ ಪುರುಷಸಿಂಹ ಮುಪೈತಿ ಲಕ್ಷ್ಮೀ ಎಂಬ ಮಾತಿನಂತೆ ಸಂಪತ್ತು ಎಂದಿಗೂ ಪರಿಶ್ರಮಿಯನ್ನು ಉದ್ಯೋಗವಂತನನ್ನು ಅರಸಿ ಬರುತ್ತದೆ ಹಾಗೂ ಪರಿಶ್ರಮದಿಂದ ಮುಂದೆ ಬಂದ ವ್ಯಕ್ತಿ ಎಂದಿಗೂ ಪ್ರಸಿದ್ಧಿ ಹೊಂದುತ್ತಾನೆ ಎಂದು ಬುದ್ಧಿವಾದ ಹೇಳಿದರು.

ಈ ಮಾತು ಸಹಜ ಹಾಗೂ ಸತ್ಯ ಅಲ್ಲವೇ. ನಮ್ಮಲ್ಲಿ ದುಡಿದಷ್ಟು ದೇಹ ದೇಗುಲವಾಗುತ್ತದೆ ಎಂಬ ಮಾತಿದೆ. ಪರಿಶ್ರಮ ಎಂಬುದು ಎಂದಿಗೂ ವ್ಯಕ್ತಿಯ ಕೈ ಬಿಡಲಾರದು ಹಾಗು ಮನುಷ್ಯನನ್ನು ಎಂತಹ ಶ್ರೇಷ್ಠ ಸ್ಥಾನಕ್ಕೂ ಕೊಂಡು ಹೋಗಬಲ್ಲದು. ಪ್ರತಿಯೊಂದು ಕೆಲಸವನ್ನು ಇತರರು ಮಾಡುವುದಕ್ಕಿಂತ ಹೆಚ್ಚು ಚೊಕ್ಕವಾಗಿ ಮಾಡಲೇಬೇಕೆಂಬ ಆಕಾಂಕ್ಷೆ ಉಳ್ಳ ವ್ಯಕ್ತಿ ಅತ್ಯಂತ ಉನ್ನತಮಟ್ಟ ಏರಬಲ್ಲ. ಪರಿಶ್ರಮದ ಹಿಂಬಾಲಕರಾಗಿ ನಮ್ಮ ಜೀವನದಲ್ಲಿ ಅವಶ್ಯಕವಾದ ಯಶಸ್ಸನ್ನು ನಮ್ಮದಾಗಿಸಿಕೊಳ್ಳೋಣ.